ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) 1996-97ನೇ ಸಾಲಿನಲ್ಲಿ ಆಯವ್ಯಯದಲ್ಲಿ ರೂ. 1.26 ಕೋಟಿಯನ್ನು ಒದಗಿಸಲಾಗಿದ್ದು, ಇನ್ನೂ ಹಣ ಬಿಡುಗಡೆ ಮಾಡಬೇಕಾಗಿದೆ.

ಪ್ರಾಥಮಿಕ ಪತ್ತಿನ (ವಿ.ಎಸ್.ಎಸ್) ಸಹಕಾರ ಸಂಘಗಳಿಗೆ ಸದಸ್ಯರನ್ನು ನಾಮನಿರ್ದೇಶನ

565 (884) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಪತ್ತಿನ (ವಿ.ಎಸ್.ಎಸ್) ಸಹಕಾರ ಸಂಘಗಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಸರ್ಕಾರವು ಉಪ ನಿಬಂಧಕರಿಗೆ ಅಧಿಕಾರ ಕೊಟ್ಟಿರುವುದು ನಿಜವೆ;

ಆ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ನಾಮನಿರ್ದೇಶನ ಮಾಡಲು ಸೂಚಿಸಲಾಗಿದೆ;

ಇ) ಹಾಗಿದ್ದಲ್ಲಿ ನಾಮನಿರ್ದೇಶನ ಮಾಡುವಾಗ ಸ್ಥಳೀಯ ಶಾಸಕರ ಶಿಫಾರಸ್ಸುಗಳನ್ನು ಪರಿಗಣಿಸಲಾಗುವುದೇ (ವಿವರ ನೀಡುವುದು)?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):

ಅ) ನಿಜವಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೀಳಗಿ ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಹೌಸಿಂಗ್ ಬೋರ್ಡ್ ಯೋಜನೆ

566 (883) ಶ್ರೀ ಜೆ.ಬಿ. ಪಾಟೀಲ್ (ಬೀಳಗಿ) ಎಂಎಲ್ಎ: ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗೃಹ ಮಂಡಳಿ ಯೋಜನೆಯಡಿಯಲ್ಲಿ ಕಾರ್ಯಕ್ರಮ ರೂಪಿಸದೇ ಇರುವ ತಾಲ್ಲೂಕುಗಳಾವುವು;

ಆ) ಇದುವರೆವಿಗೂ ಇಂತಹ ತಾಲ್ಲೂಕುಗಳಲ್ಲಿ ಈ ಯೋಜನೆ ಪ್ರಾರಂಬಿಸದಿರಲು ಕಾರಣಗಳೇನು;

ಇ) ಬಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕಿನಲ್ಲಿ ಈ ಯೋಜನೆ ಪ್ರಾರಂಭಿಸಲು ಸರ್ಕಾರ ಭರವಸೆ ನೀಡಿದರೂ ಇದುವರೆವಿಗೂ ಯಾವುದೇ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು;

ಈ) ಹಾಗಿದ್ದಲ್ಲಿ ಯಾವಾಗ ಬೀಳಗಿ ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಈ ಯೋಜನೆಯ ಕೆಲಸ ಪ್ರಾರಂಬಿಸಲಾಗುವುದು;

ಉ) ಬೀಳಗಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಕೊಳಚೆ ಪ್ರದೇಶವಿದ್ದು ಅದರ ನಿರ್ಮೂಲನೆಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):

ಅ) ತಾಲ್ಲೂಕುಗಳ ವಿವರಗಳನ್ನು ಅನುಬಂದದಲ್ಲಿ ನೀಡಲಾಗಿದೆ.

ಆ) ಈ ತಾಲ್ಲೂಕುಗಳಲ್ಲಿ ಸಾರ್ವಜನಿಕರಿಂದ ಬೇಡಿಕೆ ಪ್ರಸ್ತಾವನೆ ಇಲ್ಲದ ಕಾರಣ ಹಾಗೂ ಸೂಕ್ತ ಜಮೀನು ಲಭ್ಯವಿಲ್ಲದ ಕಾರಣ ವಸತಿ ಯೋಜನೆಯನ್ನು ಗೃಹ ಮಂಡಳಿಯು ಪ್ರಾರಂಬಿಸಿಲ್ಲ.

ಇ) ಬೀಳಗಿ ತಾಲ್ಲೂಕಿನಲ್ಲಿ ಈ ಯೋಜನೆ ಪ್ರಾರಂಭಿಸುವ ಬಗ್ಗೆ ಬೇಡಿಕೆ ಸಮೀಕ್ಷೆ ನಡೆಸಲು ಉದ್ದೇಶಿಸಲಾಗಿದೆ.

ಈ) ಬೇಡಿಕೆಗೆ ಅನುಗುಣವಾಗಿ ಯೋಜನೆಯನ್ನು ಹಮ್ಮಿಕೊಳ್ಳುವುದರ ಬಗ್ಗೆ ಪರಿಶೀಲಿಸಿ ಮುಂದಿನ ಕಾರ್ಯಕ್ರಮವನ್ನು ರೂಪಿಸಲಾಗುವುದು.

ಉ) ಬೀಳಗಿ ಪಟ್ಟಣವನ್ನು 19-6-96ರಲ್ಲಿ ಪಟ್ಟಣ ಪಂಚಾಯಿತಿ ಎಂದು ಘೋಷಿಸಲಾಗಿದೆ. ಆದರೆ ಇದುವರೆವಿಗೂ ಯಾವುದೇ ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಕಾಯಿದೆ ಅಡಿಯಲ್ಲಿ ಘೋಷಿಸಿರುವುದಿಲ್ಲ. ಸದರಿ ಪ್ರದೇಶದ ಸ್ಥಳ ಪರಿಶೀಲನೆ ಮಾಡಿ ಆ ಪ್ರದೇಶಗಳು ಕೊಳಚೆ ಪ್ರದೇಶಗಳ ಗುಣ ಲಕ್ಷಣಗಳನ್ನು ಹೊಂದಿದ್ದರೆ ಅವುಗಳನ್ನು ಗುರ್ತಿಸಿ ನಂತರ ಕಾಯಿದೆ ಅಡಿಯಲ್ಲಿ ಘೋಷಿಸಿದ ನಂತರ ಈ ಪ್ರದೇಶಗಳ ಅಭಿವೃದ್ಧಿ ಯೋಜನೆ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ಕೃಷಿ ಬೆಲೆ ನಿಗದಿ

567 (937) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆ ಇದುವರೆವಿಗೂ ಕೃಷಿ ವಸ್ತುಗಳ ಉತ್ಪಾದನೆ ಬೆಲೆ ನಿಗದಿ ಮಾಡಲು ಅನುಸರಿಸಿದ ಕ್ರಮಗಳೇನು;

ಆ) ಕೃಷಿ ಬೆಲೆ ನಿಗದಿತ ನೀತಿ ಬಗ್ಗೆ ರೈತರ ಸಮಿತಿ ಮಾಡಲು (ಆಯಾಯ ಬೆಳೆಗಳಿಗೆ ಸಂಬಂಧಪಟ್ಟಂತೆ) ಸರ್ಕಾರವು ಆಲೋಚಿಸುವುದೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಕರ್ನಾಟಕ ರಾಜ್ಯ ಸರ್ಕಾರದ ಕೃಷಿ ಇಲಾಖೆಯು ಆಯ್ದ ರೈತರಿಂದ ಬೆಳೆ ವೆಚ್ಚದ ಮಾಹಿತಿಯನ್ನು ಸಂಗ್ರಹಿಸಿ ಪ್ರತಿ ಕ್ವಿಂಟಾಲ್‌ಗೆ ತಗಲುವ ವೆಚ್ಚವನ್ನು ತಯಾರಿಸಿ, ಅದರ ಆಧಾರದ ಮೇಲೆ ಕೃಷಿ ಉತ್ಪಾದನೆ ಬೆಲೆಯನ್ನು ನಿರ್ಧರಿಸಿ, ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರದ ಕೃಷಿ